ಶ್ರೀ ಎಚ್. ಕೆ. ಶಿವರುದ್ರಪ್ಪ.—ಈ ಮಠಕ್ಕೆ ಎಷ್ಟು ಎಕರೆ ಇನಾಂತಿ ಕೊಡಲಾಗಿತ್ತು ?

*ಶ್ರೀ ಎ. ಜಿ. ರಾಮಚಂದ್ರರಾವ್.—ಈಗ ಆ ವಿವರ ನನ್ನಲ್ಲಿಲ್ಲ.

ಶ್ರೀ ಎಚ್. ಕೆ. ಶಿವರುದ್ರಪ್ಪ —ಈ ಮಠವನ್ನಾಗಲಿ ಅಥವಾ ಮಠದ ಅಧಿಪತಿಗಳನ್ನಾಗಲಿ ಸರ್ಕಾರದವರು ಅಂಗೀಕರಿಸಿಲ್ಲವೆಂದು ಹೇಳಿದೆ. ಹಾಗಿದ್ದ ಮೇಲೆ ಮೊದಲು ಈ ಮಠಕ್ಕೆ ಜಮೀನೇಕೆ ಕೊಟ್ಟಿದ್ದಾರೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಮಠಾಧಿಪತಿಗಳಿಲ್ಲದ್ದರಿಂದ ಇನಾಂ ಜಮೀನನ್ನು ವಜಾ ಮಾಡಲಾಗಿದೆ.

ಶ್ರೀ ಎಚ್. ಕೆ. ಶಿವರುದ್ರಪ್ಪ.—ಈ ಮಠದ ಭಕ್ತಾದಿಗಳು ಮಠಕ್ಕೆ ಕಟ್ಟಡವಿಲ್ಲವೆಂದು ಇತ್ತೀಚೆಗೆ 15 ಸಾವಿರ ರೂಪಾಯಿಗಳ ವೆಚ್ಚದಲ್ಲಿ ಒಂದು ಕಟ್ಟಡ ಕಟ್ಟಿಲ್ಲವೇ ? ಅದನ್ನು ಪರಿಶೀಲನುತ್ತೀರಾ ?

ಶ್ರೀ ಎ. ಜಿ. ರಾಮಚಂದ್ರರಾವ್.—ಅರ್ಜಿ ಕೊಟ್ಟರೆ ವಿಚಾರಿಸುತ್ತೇನೆ.

ಶ್ರೀ ಎಚ್. ಕೆ. ಶಿವರುದ್ರಪ್ಪ.—ತಾರೀಖು 20-11-1955 ರಲ್ಲಿ ರೆವೆನ್ಯೂ ಕಮೀಷನರು, ಡೆಪ್ಯುಟಿ ಕಮೀಷನರು ಮತ್ತು ತಾಲ್ಲೂಕು ಅಮಲ್ದಾರರು ಇವರಿಗೆ ಅರ್ಜಿ ಕೊಟ್ಟಿಲ್ಲವೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ಅದು ನಮ್ಮ ಗಮನಕ್ಕೆ ಬಂದಿಲ್ಲ.

ಶ್ರೀ ಎಚ್. ಕೆ. ಶಿವರುದ್ರಪ್ಪ.—ಸರ್ಕಾರವನ್ನು ಅಪ್ರೋಚ್ ಮಾಡಿ ಎಂದು ಎಂಡಾರ್ಸ್‌ಮೆಂಟ್ ಕೊಟ್ಟಿರುವುದರಿಂದ ಸಂಬಂಧಪಟ್ಟ ರಿಕಾರ್ಡನ್ನು ತರಿಸಿ ಪರಿಶೀಲನುವುದು ಸೂಕ್ತವಲ್ಲವೆ ?

ಶ್ರೀ ಎ. ಜಿ. ರಾಮಚಂದ್ರರಾವ್.—ವಿಚಾರಿಸುತ್ತೇನೆ.

Sri Mulka GOVINDA REDDY.—Is it not against the Constitution to allow these Mutts to commit havoc in the State ?

Sri A. G. RAMACHANDRA RAO.—I am not aware of any such havoc.

Sri Mulka GOVINDA REDDY.—Will the Government think of abolishing all these Mutts ?

Sri A. G. RAMACHANDRA RAO.—I do not know whether Government have any such powers under the Constitution.

ಶ್ರೀ ಎ. ವೆಂಕಟಪ್ಪ.—15 ಸಾವಿರ ರೂಪಾಯಿ ಖರ್ಚುಮಾಡಿ ಮಠ ಕಟ್ಟಿಲ್ಲವೆ ಎಂದು ಕೇಳಿದರೆ ಅರ್ಜಿ ಕೊಟ್ಟರೆ ವಿಚಾರಿಸುತ್ತೇವೆಂದು ಹೇಳಿದರೆ ಅರ್ಥವೇನು ?

ಶ್ರೀ ಎ. ಜಿ. ರಾಮಚಂದ್ರರಾವ್.—ಇನಾಂ ಕೊಟ್ಟಿರುವುದನ್ನು ರೆನ್ಯೂಂ ಮಾಡಿಕೊಂಡಿದ್ದಾರೆ.

ಶ್ರೀ ವಿ. ವೆಂಕಟಪ್ಪ.—ಮಠಕ್ಕೆ 15 ಸಾವಿರ ರೂಪಾಯಿ ಕೊಟ್ಟು ಕಟ್ಟಿಸಿದ ಕಟ್ಟಿರುವುದು ಸಾರ್ವತ್ರಿಕರ ಮುಂದೆ ಇಲ್ಲವೆ ಎಂದು ಕೇಳಿದರೆ ಅರ್ಜಿಕೊಟ್ಟರೆ ವಿಚಾರಿಸುತ್ತೇವೆಂದು ಹೇಳಿದರೆ ಹೇಗೆ ? ಕಟ್ಟಿದ್ದಾರೆ ಅಥವಾ ಇಲ್ಲ ಎಂದು ಹೇಳಬೇಡವೆ ?

Sri A. G. RAMACHANDRA RAO.—I submit Sir, in the records of Government there is neither the Mutt nor the name. Somebody might have built it; we have no information.

Mr. SPEAKER.—Whether there is such a building is the question.

Sri A. G. RAMACHANDRA RAO.—Even if there is a building, how is Government interested in that ?

Writ petitions pending in High Court.

Q.—382. Sri S. GOPALA GOWDA (Sagar-Hosanagar).—

Will the Government be pleased to state :—

(*a*) the number of writ petitions pending disposal in the High Court of Mysore (particulars of petitions admitted yearwise may be given) ;

(*b*) the number of appeals pending disposal in the above High Court (particulars may be given yearwise) ?

A.—Sri A. G. RAMACHANDRA RAO (Minister for Law and Education).—

(*a*) *Vide* statement No. I appended.

(*b*) *Vide* statement No. II appended.

STATEMENT No. I.

Statement showing the number of Writ Petitions pending disposal, with particulars of Petitions admitted yearwise.

...	Pending as on 1-2-1956	1953	1954	1955	1956
Writ Petitions ...	212	11	51	133	17

(SRI A. G. RAMACHANDRA RAO.)

STATEMENT No. II.

Statement showing the number of Appeals pending Disposal (yearwise).

Sl.No.	Nature of Appeals	1950–51	1951–52	52–53	1953	1954	1955	1956	Total
1	Regular Appeals ...	22	111	71	90	226	152	30	702
2	Second Appeals ...	2	104	105	238	354	419	56	1,278
3	Miscellaneous Appeals	...	1	1	4	8	32	5	51
4	Criminal Appeals ...	...	...	...	4	1	46	12	63

ಶ್ರೀ ಎಸ್. ಗೋಪಾಲಗೌಡ.—ರಿಟ್ ಅರ್ಜಿಗಳಲ್ಲಿ ಒಟ್ಟು 212 ಅರ್ಜಿಗಳು ಈಗ ಹೈಕೋರ್ಟಿನಲ್ಲಿ ಪೆಂಡಿಂಗ್‌ನಲ್ಲಿವೆಯೆಂದು ಉತ್ತರವಿದೆ. ಅದರಲ್ಲಿ 1953ರಲ್ಲಿ ಅಡ್ಮಿಟ್ ಆಗಿರುವುದರಲ್ಲಿ 11, 1954ರಲ್ಲಿ 51, 1955ರಲ್ಲಿ 133 ಮತ್ತು ಈ ವರ್ಷ 1956ರಲ್ಲಿ 17 ಹೀಗೆ 212 ಅರ್ಜಿ ಈಗ ಹೈಕೋರ್ಟಿನಲ್ಲಿ ಪೆಂಡಿಂಗ್‌ನಲ್ಲಿವೆಯೆಂದು ಉತ್ತರ ಕೊಟ್ಟಿದೆ. ಈ ರೀತಿ ಪೆಂಡಿಂಗ್ ಇರುವುದಕ್ಕೇನು ಕಾರಣ?

*ಶ್ರೀ ಎ. ಜಿ. ರಾಮಚಂದ್ರರಾವ್.—ಅದನ್ನು ವಿಚಾರಿಸಿ ಹೇಳಬೇಕು.

ಶ್ರೀ ಎಸ್. ಗೋಪಾಲಗೌಡ.—ಈಗ ಸರ್ಕಾರಕ್ಕೆ ರಿಟ್ ಅರ್ಜಿಗಳು ಮತ್ತು ಅಪೀಲು ಅರ್ಜಿಗಳು ಪೆಂಡಿಂಗ್ ಇರುವುದಕ್ಕೇನಾದರೂ ಕಾರಣ ಕೊಟ್ಟಿದ್ದಾರೆಯೇ ಅಥವಾ ಬರೀ ಇಫರ್ಮೇಷನ್ ಮಾತ್ರ ಕೊಟ್ಟಿದ್ದಾರೆಯೇ?

ಶ್ರೀ ಎ. ಜಿ. ರಾಮಚಂದ್ರರಾವ್.—ಇಫರ್ಮೇಷನ್ ಮಾತ್ರ ಕೊಟ್ಟಿದ್ದಾರೆ.

ಶ್ರೀ ಎಸ್. ಗೋಪಾಲಗೌಡ.—ಇದೇ ರೀತಿ ಸುಮಾರು 2,094 ಅಪೀಲುಗಳು ಇತ್ಯರ್ಥವಾಗದೆ ಇವೆ. ಈ ವಿಷಯವನ್ನು ಸುಪ್ರೀಂ ಕೋರ್ಟಿಗೆ ತಿಳಿಸಿ ಈ ವಿಷಯವಾಗಿ ಅಲ್ಲಿಂದ ಮೈಸೂರು ಹೈಕೋರ್ಟಿಗೆ ಕೇಸುಗಳನ್ನು ಜಾಗ್ರತೆ ಫೈನಲು ಮಾಡಬೇಕೆಂದು ಒಂದು ಡೈರೆಕ್ಷನ್ ಕೊಡುವ ಹಾಗೆ ತಿಳಿಸಿದ್ದಾರೆಂಬುದೂ ಅದಕ್ಕೆ ಅದಷ್ಟು ಜಾಗ್ರತೆ ಫೈನಲು ಮಾಡುತ್ತೇವೆಂದು ಬರೆದಿರುವುದೂ ನಿಜವೆ?

ಶ್ರೀ ಎ. ಜಿ. ರಾಮಚಂದ್ರರಾವ್.—ಇಲ್ಲ. ಆದರೆ ಇಫರ್ಮೇಷನ್ ಸುಪ್ರೀಂ ಕೋರ್ಟಿಗೆ ಹೋಗಿದೆ.

Sri Mulka GOVINDA REDDY.—Is it not a fact that the matter about pendency of appeals and writs in the High Court was brought to the notice of the Government in the last session?

Sri A. G. RAMACHANDRA RAO.—Yes.

Sri Mulka GOVINDA REDDY—May I know the action taken by Government?

Sri A. G. RAMACHANDRA RAO.—The Government have taken no action because the High Court works under the jurisdiction of the Supreme Court.

Sri Mulka GOVINDA REDDY.—Will this Government write to the Supreme Court that there is a lot of pendency of cases in the High Court of Mysore?

Sri A. G. RAMACHANDRA RAO.—No; we are not called upon to write to them. We had entered into correspondence with Government of India. They have said that to the extent of supplying information to the questions, it may be done. Regarding jurisdiction, the Union Government and the Supreme Court exercise it.

Mr. SPEAKER.—Government have said that this information has reached the concerned quarters.

ಶ್ರೀ ಆರ್. ಅನಂತರಾಮ್.—ಇಷ್ಟು ರಿಟ್ ಅರ್ಜಿ ಮತ್ತು ಅಪೀಲು ತೀರ್ಮಾನವಾಗದಿರುವುದಕ್ಕೆ ಸಾಕಾದಷ್ಟು ಜಡ್ಜಿಗಳಿಲ್ಲದಿರುವುದೇ ಕಾರಣವಲ್ಲವೆ?

Sri A. G. RAMACHANDRA RAO.—Not necessarily.

Sri K. PUTTASWAMY.—Is there any fixed hours of work prescribed to the Judges?

Sri A. G. RAMACHANDRA RAO.—Yes.

Sri K. PUTTASWAMY—Are the Government satisfied that there has been sufficient disposal of cases in the High Court?

Sri A. G. RAMACHANDRA RAO.—We have no dissatisfaction.